ಸಿ ಸಿ ನಂಃ 126ಃ2017 ಪಿಡಬ್ಲ್ಯೂ-1

ದಿನಾಂಕಃ 20-02-2021 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ- ಪಿರ್ಯಾದುದಾರರ ಪರ ಶ್ರೀ ಎಸ್.ಜೆ.ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಸಾಕ್ಷಿಯು ಮೂಲ ಚೆಕ್‌ನ್ನು ನೋಡಿ ಆರೋಪಿಯ ಸಹಿಯನ್ನು ಗುರುತಿಸಿದ್ದು ಮೂಲ ಚೆಕ್‌ನ್ನು ನಿಪಿ 1 ಎಂದು ಗುರುತಿಸಲಾಯಿತು, ಆರೋಪಿ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು, ಬ್ಯಾಂಕ್ ಮೆಮೋವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು, ವಕೀಲರ ಮೂಲಕ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಅನ್‌ಕ್ಲೇಮ್‌ಡ್ ಎಂಬ ಷರದೊಂದಿಗೆ ಜಾರಿಯಾಗದೆ ವಾಪಸ್ಸು ಬಂದ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೊಡಲಾಗಿ ಅದರಲ್ಲಿ ಇರುವ ದಿನಾಂಕ 14.05.2015 ರ ತಿಳುವಳಿಕೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ5 ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಗುಣವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.